**ದಿಃ 03.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ.ಬಿ.ಸಿ.ಕೆ ವಕೀಲರಿಂದಃ ಅರ್ಜಿದಾರರ ಪರವಾಗಿಃ**

7) ಪ್ರ.ವ.ವರದಿಯ ದೃಡೀಕೃತ ನಕಲನ್ನು ನಿ.ಪಿ–1 ಎಂದು, ಪಿರ್ಯಾದಿಯ ದೃಢೀಕೃತ ನಕಲನ್ನು ನಿ.ಪಿ–2 ಎಂದು, ಘಟನಾ ಸ್ಥಳದ ಪಂಚನಾಮೆಯ ದೃಢೀಕೃತ ನಕಲನ್ನು ನಿ.ಪಿ–3 ಎಂದು, ವಾಹನ ಜಪ್ತು ಪಂಚನಾಮೆಯ ದೃಢೀಕೃತ ನಕಲನ್ನು ನಿ.ಪಿ–4 ಎಂದು, ಮೋಟಾರು ವಾಹನ ಯಾಂತ್ರಿಕ ತಪಾಸಣಾ ವರದಿಯ ದೃಢೀಕೃತ ನಕಲನ್ನು ನಿ.ಪಿ–5 ಎಂದು, ಅಂತಿಮ ವರದಿಯ ದೃಢೀಕೃತ ನಕಲನ್ನು ನಿ.ಪಿ–6 ಎಂದು ಗುರುತಿಸಲಾಯಿತು. ಗಾಯದ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ–7 ಎಂದು, ಡಿಸಚಾರ್ಜ ಸಮ್ಮರಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ–8 ಎಂದು, 6 ಔಷಧ ಖರೀದಿ

ಮಾಡಿದ ಬಿಲ್ಲುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ-9 ಎಂದು ಗುರುತಿಸಲಾಯಿತು. ಅಂಗನ್ಯೂನತಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-10 ಎಂದು ಗುರುತಿಸಲಾಯಿತು. ಒಂದು ಎಕ್ಸರೇ ಫಿಲಂವುಳ್ಳ ಕವರನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-11 ಎಂದು ಗುರುತಿಸಲಾಯಿತು. ಸದರಿ ಎಕ್ಸರೇ ಪಿಲಂಗೆ ಸಂಬಂದಪಟ್ಟ ವರದಿಯನ್ನು ನಿ.ಪಿ-12 ಎಂದು ಗುರುತಿಸಲಾಯಿತು.

8) ಅರ್ಜಿದಾರರ ಆಧಾರಕಾರ್ಡಿನ ಅಟೆಸ್ಟೆಡ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-13 ಎಂದು ಗುರುತಿಸಲಾಯಿತು. ಅರ್ಜಿದಾರರ ಪ್ಯಾನಕಾರ್ಡಿನ ಅಟೆಸ್ಟೆಡ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-14 ಎಂದು ಗುರುತಿಸಲಾಯಿತು. ಅರ್ಜಿದಾರರ ಬ್ಯಾಂಕಪಾಸಪುಸ್ತಕದ ಅಟೆಸ್ಟೆಡ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-15 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಎಂ.ಜಿ.ಎಂ ವಕೀಲರಿಂದಃ 2 ನೇ ಎದುರುದಾರರ ಪರವಾಗಿಃ**

9) ಈ ಪ್ರಕರಣದಲ್ಲಿ ಹೇಳಿದಂತಹ ಅಪಘಾತವು ದಿನಾಂಕಃ 19.12.2023 ರಂದು ಆಗಿರುತ್ತದೆ. ಸದರಿ ಅಪಘಾತವು ಬೆಳಗಿನ 8-00 ಘಂಟೆಗೆ ಆಗಿರುತ್ತದೆ. ಮೇಲೆ ಹೇಳಿದ ದಿನಾಂಕದಂದು ನಾನು ಚಿರ್ತದುರ್ಗದಿಂದ ಶಿವಮೊಗ್ಗದ ಎನ್.ಹೆಚ್-13 ರಸ್ತೆಯಲ್ಲಿ ಎಡಗಡೆ ಬದಿಯಲ್ಲಿ ನಾನು ನಡೆದುಕೊಂಡು ಹೊರಟಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅದೇ ರೀತಿ ನಾನು ರಸ್ತೆಯ ಎಡಬದಿಯಲ್ಲಿ ನಡೆದುಕೊಂಡು ಹೊರಟಾಗ ಟ್ರ್ಯಾಕ್ಟರ ಸಂಖ್ಯೆಃ ಕೆಎ-17/ಟಿಇ-5462 ಈ ವಾಹನದ ಚಾಲಕನ್ನು ತನ್ನ ಟ್ರ್ಯಾಕ್ಟರನ್ನು ಅತೀ ವೇಗದಿಂದ ಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿಕೊಂಡು ಬಂದು ನನಗೆ

ಹಿಂದಿನಿಂದ ಡಿಕ್ಕಿಪಡಿಸಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

10) ಅಪಘಾತವಾದ ತಕ್ಷಣ ನಾನು ಶಿವಮೊಗ್ಗದಲ್ಲಿರುವ ಸಹ್ಯಾದ್ರಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಾಗಿರುತ್ತೇನೆ. ನಿ.ಪಿ-9 ಗಾಯದ ಪ್ರಮಾಣ ಪತ್ರದಲ್ಲಿ ನನಗೆ ಟ್ರಕ್ಕಿನ ಚಾಲಕನು ತನ್ನ ಟ್ರಕ್ಕನ್ನು ಅತೀ ವೇಗದಿಂದ ಚಾಲನೆ ಮಾಡಿಕೊಂಡು ಬಂದು ಡಿಕ್ಕಿಪಡಿಸಿರುತ್ತಾನೆ ಎಂದು ಬರೆಯಿಸಿರುತ್ತೇನೆ ಅಂದರೆ ಸರಿಯಲ್ಲ. ಆದರೆ ಟ್ರ್ಯಾಕ್ಟರ ಚಾಲಕನು ನನಗೆ ಡಿಕ್ಕಿಪಡಿಸಿರುತ್ತಾನೆ. ನನಗೆ ಟ್ರ್ಯಾಕ್ಟರ ಚಾಲಕನು ತನ್ನ ಟ್ರ್ಯಾಕ್ಟರನ್ನು ಅತೀ ವೇಗದಿಂದ ನಡೆಸಿಕೊಂಡು ಬಂದು ಹಿಂದಿನಿಂದ ಡಿಕ್ಕಿಪಡಿಸಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರದಲ್ಲಿ ಬೆಳಗಿನ 7-00 ಘಂಟೆಗೆ ಟ್ರಕ್ಕಿನ ಚಾಲಕನು ನನಗೆ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತಾನೆ ಎಂದು ಬರೆಯಲಾಗಿದೆ ಅಂದರೆ ಸರಿಯಲ್ಲ. ನಾನು ಮತ್ತು ಪೊಲೀಸರು ಹಾಗೂ ವೈದ್ಯರು ಎಲ್ಲರೂ ಸೇರಿಕೊಂಡು ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ. ನಾನು ಶಿವಮೊಗ್ಗದ ಸಹ್ಯಾದ್ರಿ ಮಲ್ಟಿಸ್ಪೆಷ್ಲಾಲಿಟಿ ಆಸ್ಪತ್ರೆಯಲ್ಲಿ ಕೇವಲ ಚಿಕಿತ್ಸೆ ಪಡೆದಿರುತ್ತೇನೆ ಮತ್ತು ನಾನು ಎಸ್.ಎಸ್.ಆಸ್ಪತ್ರೆಯಲ್ಲಿಯೂ ಸಹ ಚಿಕಿತ್ಸೆ ಪಡೆದಿದ್ದೇನೆ ಎಂದು ಮುಂದುವರೆದು ನುಡಿಯುತ್ತಾರೆ.

11) ನಾನು ಎಸ್.ಎಸ್ ಆಸ್ಪತ್ರೆಯಲ್ಲಿ ಕೇವಲ ಅಂಗನ್ಯೂನತೆ ಪ್ರಮಾಣ ಪತ್ರ ಪಡೆಯಲು ಹೋಗಿದ್ದೆ ಅಂದರೆ ಸರಿಯಲ್ಲ. ನಾನು ಶಿವಮೊಗ್ಗದ ನಾರಾಯಣ ಆಸ್ಪತ್ರೆಯಲ್ಲಿ 15 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಸದರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದಾಗ ಒಟ್ಟು

ರೂ.7,00,000/- ವೈದ್ಯಕೀಯ ಖರ್ಚಿಗಾಗಿ ಹಣವನ್ನು ಖರ್ಚು ಮಾಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ವೈದ್ಯಕೀಯ ಬಿಲ್ಲುಗಳು ಖೊಟ್ಟಿಯಾಗಿರುತ್ತವೆ ಅಂದರೆ ಸರಿಯಲ್ಲ.

12) ಅಪಘಾತವಾದಾಗ ನನಗೆ 29 ವರ್ಷ ವಯಸ್ಸು ಆಗಿತ್ತು ಮತ್ತು ನಾನು ಕೂಲಿ ಕೆಲಸ ಮಾಡಿ ತಿಂಗಳಿಗೆ ರೂ.35,000/- ಗಳನ್ನು ಗಳಿಸುತ್ತಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಪಘಾತದಲ್ಲಿ ನನಗೆ ಯಾವುದೇ ಅಂಗನ್ಯೂನತೆ ಆಗಿಲ್ಲ ಅಂದರೆ ಸರಿಯಲ್ಲ, ನಾನು ಈಗಲೂ ಸಹ ಮೊದಲಿನ ಹಾಗೇ ಕೆಲಸ ಮಾಡಿಕೊಂಡು ಹೋಗುತ್ತಿದ್ದೇನೆ ಅಂದರೆ ಸರಿಯಲ್ಲ. ಆದ್ದರಿಂದ 2 ನೇ ಎದುರುದಾರ ವಿಮೆ ಕಂಪನಿಯವರು ನನಗೆ ವಿಮೆ ಪರಿಹಾರ ಕೊಡಲು ಬಾಧ್ಯಸ್ಥರು ಆಗುವದಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.